**ದಿನಾಂಕಃ 11.12.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **ವಾದಿ ಪರ** ಶ್ರೀ ಎಂ ಡಿ **ವಕೀಲರಿಂದಃ**

ನಾನು 2 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ಈ ದಾವೆಯ ವಾದಿ ನನ್ನ ಅಣ್ಣ. ನನ್ನ ತಂದೆ ಹೆಸರು ಮಲ್ಲಪ್ಪ. ನನ್ನ ತಾತನ ಹೆಸರು ಚೆನ್ನಬಸಪ್ಪ. ನಾನು ಹಾಲಿ ದೊಡ್ಡನಹುಂಡಿ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ಸದರಿ ದೊಡ್ಡನಹುಂಡಿ ಗ್ರಾಮವು ನನ್ನ ತಾಯಿಯ ಊರಾಗಿರುತ್ತದೆ. ನಾನು ಮತ್ತು ವಾದಿಯು ಇಲ್ಲಿಯವರೆಗೂ ವಿಭಾಗವಾಗಿರುವುದಿಲ್ಲ. ಆದರೆ ನಾನು ಮತ್ತು ವಾದಿಯು ಸುಮಾರು 20 ವರ್ಷಗಳಿಂದ ಬೇರೆ ಬೇರೆಯಾಗಿ ವಾಸಿಸುತ್ತಿದ್ದೇವೆ.ನಾನು ನನ್ನ ತಂದೆ ಮತ್ತು ನನ್ನ ಅಣ್ಣನ ಸಹಿಗಳನ್ನು ನೋಡಿರುವುದಿಲ್ಲ. ನಿ ಪಿ 6 ರಲ್ಲಿರುವ ಸಹಿಗಳು ನನ್ನದಲ್ಲ.ಮುಂದುವರೆದು ಸದರಿ ನಿಪಿ 6 ರಲ್ಲಿರುವ ಸಹಿಗಳು ನನ್ನ ತಂದೆಯದಾಗಿರುವುದಿಲ್ಲ. ನಾನು ಈ ದಾವೆಯಲ್ಲಿ ವಕೀಲರನ್ನು ನೇಮಕಮಾಡಿಕೊಂಡು ವಕಾಲತ್ ಮತ್ತು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿದಾರರಿಗೆ 2 ವಕಾಲತ್ ನಲ್ಲಿರುವ ಸಹಿಗಳನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಸಹಿಯನ್ನು ನೋಡಿ ಒಪ್ಪಿಕೊಳ್ಳುತ್ತಾರೆ. ಅದೇ ರೀತಿ ಪ್ರತಿವಾದ ಪತ್ರ ಮತ್ತು ಪ್ರಮಾಣಪತ್ರದಲ್ಲಿರುವ ಸಹಿಗಳು ನನ್ನದಾಗಿರುತ್ತವೆ. ವಕಾಲತ್, ಪ್ರತಿವಾದ ಪತ್ರ, ಪ್ರಮಾಣ ಪತ್ರ ಮತ್ತು ನಿಪಿ 6 ರಲ್ಲಿರುವ ಸಹಿಗಳು ಒಂದೇ ಆಗಿದ್ದು ನನ್ನದಾಗಿರುತ್ತವೆ ಎಂದರೆ ಸರಿಯಲ್ಲ.

ದಿನಾಂಕ 07.06.2007 ರ ಪಂಚಾಯಿತಿ ವಿಭಾಗ ಪತ್ರದ ಮೂಲಕ ನಾನು, ನನ್ನ ಅಣ್ಣ ಮತ್ತು ನನ್ನ ತಂದೆಯು ನಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮಗೂ ಮತ್ತು ನಮ್ಮ ಗ್ರಾಮದ ಎಂ ಗುರುಸ್ವಾಮಿ, ಪಿ ಲಿಂಗಪ್ಪರವರ ನಡುವೆ ವೈಮನಸ್ಸು ಇರುತ್ತದೆ. ಸದರಿ ಎಂ ಗುರುಸ್ವಾಮಿ ಮತ್ತು ಪಿ ಲಿಂಗಪ್ಪರವರು ನಮ್ಮ ಗ್ರಾಮದ ಯಜಮಾನರು ಎಂದರೆ ಸರಿ. ನಮ್ಮ ಕುಟುಂಬಕ್ಕೂ ಮತ್ತು ಎಂ ಗುರುಸ್ವಾಮಿ, ಪಿ ಲಿಂಗಪ್ಪರವರ ನಡುವೆ ಯಾವುದೇ ಸಂಬಂಧ ಇರುವುದಿಲ್ಲ. ಸದರಿ ಎಂ ಗುರುಸ್ವಾಮಿ, ಪಿ ಲಿಂಗಪ್ಪರವರ ಸಮಕ್ಷಮ ನಾನು, ನನ್ನ ಅಣ್ಣ ಮತ್ತು ನನ್ನ ತಂದೆಯು ನಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಪ್ರತಿವಾದಿ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರತಿವಾದ ಪತ್ರವನ್ನು ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದಿನಾಂಕ 07.06.2007 ರ ವಿಭಾಗ ಪತ್ರದ ಮೂಲಕ ನಾನು, ನನ್ನ ಅಣ್ಣ ಮತ್ತು ನನ್ನ ತಂದೆಯು ನಮ್ಮ ಕುಟುಂಬದ ಆಸ್ತಿಗಳನ್ನು ಎ, ಬಿ , ಸಿ ಶೆಡ್ಯೂಲ್ ಗಳಂತೆ ವಿಭಾಗ ಮಾಡಿಕೊಂಡು ಅಂದಿನಿಂದ ಬೇರೆ ಬೇರೆಯಾಗಿ ಸದರಿ ಆಸ್ತಿಗಳನ್ನು ಸಾಗುವಳಿ ಮಾಡಿಕೊಂಡು ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ಮೂಲಕ ಟಿ ದೊಡ್ಡಪುರ ಗ್ರಾಮದ ಸರ್ವೆ ನಂ. 351/1 ರಲ್ಲಿ 20 ಗುಂಟೆ ಜಮೀನು ನನ್ನ ತಂದೆಯಾದ ಮಲ್ಲಪ್ಪರವರ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಸದರಿ ಜಮೀನು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ನನ್ನ ತಂದೆ ಮಲ್ಲಪ್ಪರವರ ಮರಣ ನಂತರ ಸದರಿ ಸರ್ವೆ ನಂ. 351/1 ರಲ್ಲಿ 20 ಗುಂಟೆ

ಜಮೀನು ನನ್ನ ಮತ್ತು ವಾದಿಯ ನಡುವೆ ಸಮಾನವಾಗಿ ಹಂಚಿಕೆಯಾಗಬೇಕು ಎಂದು ನಮೂದಿಸಿದೆ ಎಂದರೆ ಸರಿಯಲ್ಲ. ಸದರಿ ನಿಪಿ 6 ರ ಪಂಚಾಯಿತಿ ವಿಭಾಗ ಪತ್ರದಲ್ಲಿ ಟಿ ದೊಡ್ಡಪುರ ಗ್ರಾಮದ ಸರ್ವೆ ನಂ. 352 ರ 38 ಗುಂಟೆ ಜಮೀನಿನಲ್ಲಿ ಪೂರ್ವದ ಕಡೆಗೆ 19 ಗುಂಟೆ ಜಮೀನು ವಾದಿಯ ಭಾಗಕ್ಕೆ ಮತ್ತು ಪಶ್ಚಿಮದ ಕಡೆಗೆ 19 ಗುಂಟೆ ಜಮೀನು ನನ್ನ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಸದರಿ ನಿಪಿ 6 ರ ಪಂಚಾಯಿತಿ ವಿಭಾಗ ಪತ್ರದಲ್ಲಿ ಮಾದಾಪುರ ಗ್ರಾಮದ ಸರ್ವೆ ನಂ. 62/1 ರ 13 ಗುಂಟೆ ಜಮೀನಿನಲ್ಲಿ ದಕ್ಷಿಣದ ಕಡೆಗೆ 6 ½ ಗುಂಟೆ ಜಮೀನು ವಾದಿಯ ಭಾಗಕ್ಕೆ ಮತ್ತು ಉತ್ತರದ ಕಡೆಗೆ 6 ½ ಗುಂಟೆ ಜಮೀನು ನನ್ನ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಸದರಿ ನಿಪಿ 6 ರ ವಿಭಾಗ ಪತ್ರದಲ್ಲಿ ನಮೂದಿಸಿರುವ ಸಿ ಶೆಡ್ಯೂಲ್ ಆಸ್ತಿಗಳು ನನ್ನ ಭಾಗಕ್ಕೆ ಬಂದವು ಎಂದರೆ ಸರಿಯಲ್ಲ.

ಮಾದಾಪುರ ಗ್ರಾಮದಲ್ಲಿ ನಿವೇಶನ ಸಂಖ್ಯೆ 39 ಮತ್ತು 40 ರ ನಿವೇಶನಗಳು ನಮ್ಮ ಕುಟುಂಬಕ್ಕೆ ಸೇರಿದವು ಎಂದರೆ ಸರಿ. ಸದರಿ 2 ನಿವೇಶನಗಳಲ್ಲಿ ನಿ ಪಿ 6 ರವಿಭಾಗ ಪತ್ರದಂತೆ ನಿವೇಶನ ಸಂಖ್ಯೆ 39 ವಾದಿಯ ಭಾಗಕ್ಕೆ ಮತ್ತು ನಿವೇಶನ ಸಂಖ್ಯೆ 40 ನನ್ನ ಭಾಗಕ್ಕೆ ಬಂದಿವೆ ಎಂದರೆ ಸಾಕ್ಷಿದಾರರು ಸದರಿ ನಿವೇಶನ ಸಂಖ್ಯೆ ನನಗೆ ಗೊತ್ತಿಲ್ಲ ಆದರೆ ನಾನು ಮತ್ತು ವಾದಿಯು ಒಂದೊಂದು ನಿವೇಶನದಲ್ಲಿ ಫಸಲು ಒಕ್ಕಣೆ ಮಾಡುತ್ತೇವೆ ಎಂದು ನುಡಿಯುತ್ತಾರೆ. ಸದರಿ ನಿವೇಶನಗಳನ್ನು ನನ್ನ ತಂದೆಯ ಜೀವಿತಾವಧಿಯಿಂದಲೂ ನಾನು ಮತ್ತು ವಾದಿಯು ಪ್ರತ್ಯೇಕವಾಗಿ ಅನುಭವಿಸುತ್ತಿದ್ದೇವೆ.

ದಿನಾಂಕ 24.11.2015 ರಂದು ನನ್ನ ತಂದೆಯು ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಜೀವತಾವಧಿಯಲ್ಲಿಯೇ ವಾದಿಯು ದಾವಾ 2 ನೇ ಅನುಸೂಚಿ ಸ್ವತ್ತಿನಲ್ಲಿ ಕಬ್ಬನ್ನು ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಬೆಳೆದ ಕಬ್ಬನ್ನು ವಾದಿಯು ಬನ್ನಾರಿಯಮ್ಮ ಸಕ್ಕರೆ ಕಾರ್ಖಾನೆಗೆ ಸಾಗಿಸುತ್ತಿದ್ದಾರೆ ಎಂದರೆ ಸಾಕ್ಷಿದಾರರು ವಾದಿಯು ಕಬ್ಬನ್ನು ಸದರಿ ಕಾರ್ಖಾನೆಗೆ ಸಾಗಿಸುತ್ತಾರೆ ಆದರೆ ದಾವಾ 2 ನೇ ಅನುಸೂಚಿ ಸ್ವತ್ತಿನಲ್ಲಿ ಯಾವುದೇ ಕಬ್ಬನ್ನು ಬೆಳೆಯುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರರು ಮುಂದುವರೆದು ವಾದಿಯು ಬೇರೆ ಸರ್ವೆ ನಂಬರ್ ನಲ್ಲಿ ಕಬ್ಬನ್ನು ಬೆಳೆಯುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ಯಾವ ಸರ್ವೆ ನಂಬರ್ ಜಮೀನಿನಲ್ಲಿ ಕಬ್ಬನ್ನು ಬೆಳೆಯುತ್ತಾರೆ ಎಂದು ನನಗೆ ನೆನಪಿಲ್ಲ. ಸಾಕ್ಷಿದಾರರು ಮುಂದುವರೆದು ಸದರಿ ಜಮೀನಿನಲ್ಲಿ ನಾನು ಮತ್ತು ವಾದಿಯು ಇಬ್ಬರು ಪ್ರತ್ಯೇಕವಾಗಿ ಕಬ್ಬನ್ನು ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ನಿಪಿ 6 ರ ವಿಭಾಗ ಪತ್ರದಂತೆ ಸರ್ವೆ ನಂ. 352 ರ ಜಮೀನಿನಲ್ಲಿ ವಾದಿಗೆ ಮತ್ತು ನನಗೆ ತಲಾ 19 ಗುಂಟೆ ಜಮೀನು ಬಂದು, ಸದರಿ ಜಮೀನಿನಲ್ಲಿ ನಾವುಗಳು ಪ್ರತ್ಯೇಕವಾಗಿ ನಮ್ಮ ನಮ್ಮ ಭಾಗಕ್ಕೆ ಬಂದ ಜಮೀನಿನಲ್ಲಿ ಕಬ್ಬನ್ನು ಬೆಳೆದು ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯು ನಿಪಿ 1 ರಿಂದ 3 ರಂತೆ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಸಾಗಿಸುವ ದಾಖಲಾತಿಗಳನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ನಿಪಿ 1 ರಿಂದ 3 ರ ದಾಖಲಾತಿಗಳು ವಾದಿಯ ಹೆಸರಿನಲ್ಲಿ ಇವೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ 6 ರ ವಿಭಾಗ ಪತ್ರವನ್ನು 2 ಪ್ರತಿಗಳನ್ನಾಗಿ ಬೆರಳಚ್ಚು ಮಾಡಿಸಿ ಒಂದು ಪ್ರತಿಯನ್ನು ನನಗೂ ನೀಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 24.11.2015 ರಂದು ನನ್ನ ತಂದೆಯು ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆಯು ಮರಣ ಹೊಂದಿದಾಗ ನನ್ನ ತಂದೆಗೆ 81 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯು ಮರಣ ಹೊಂದಿದ ನಂತರ ವಾದಿಯು ನಿಪಿ 4 ರ ದಾಖಲಾತಿಯಂತೆ ತಾಲೂಕು ಕಛೇರಿಗೆ ಅರ್ಜಿ ಸಲ್ಲಿಸಿ ಜಮೀನುಗಳ ಖಾತೆಗಳನ್ನು ವರ್ಗಾವಣೆ ಕೋರಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿ ಡಿ 3 ರ ಎಂ ಆರ್ ದಾಖಲೆಯಂತೆ ಸರ್ವೆ ನಂ. 351 ರಲ್ಲಿ 20 ಗುಂಟೆ, ಸರ್ವೆ ನಂ. 352 ರಲ್ಲಿ 38 ಗುಂಟೆ ಜಮೀನು ನನ್ನ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ಸದರಿ ಖಾತೆ ಬದಲಾವಣೆ ಮಾಡಿಸಿಕೊಂಡ ವಿಚಾರವನ್ನು ನಾನು ವಾದಿಯವರಿಗೆ ತಿಳಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಸದರಿ ಖಾತೆಯನ್ನು ನಾನು ನನ್ನ ತಂದೆಯು ಬರೆದಿದ್ದ ಮರಣ ಶಾಸನದ ಪ್ರಕಾರ ಮಾಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಮರಣ ಶಾಸನದ ಪ್ರಕಾರ ಜಮೀನುಗಳ ಖಾತೆಗಳನ್ನು ಬದಲಾವಣೆ ಮಾಡಿಸಿಕೊಳ್ಳಲು ನ್ಯಾಯಾಲಯದಿಂದ ಯಾವುದೇ ಆದೇಶ ಪಡೆದುಕೊಂಡಿರುವುದಿಲ್ಲ. ಸದರಿ ಮರಣ ಶಾಸನದ ಪ್ರಕಾರ ಜಮೀನುಗಳ ಖಾತೆಗಳನ್ನು ಬದಲಾವಣೆ ಮಾಡಲು ಕಂದಾಯ ಅಧಿಕಾರಿಗಳಿಗೆ ಯಾವುದೇ ಅಧಿಕಾರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮರಣ ಶಾಸನದ ಪ್ರಕಾರ ಜಮೀನುಗಳ ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿದ ಆದೇಶದ ಮೇಲೆ ವಾದಿಯು ಉಪ ವಿಭಾಗಾಧಿಕಾರಿಗಳ ಸಮಕ್ಷಮದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ಪ್ರಕರಣದಲ್ಲಿ ನಾನು ಹಾಜರಾಗಿಲ್ಲ ಎಂದರೆ ಸರಿ. ಸದರಿ ಮೇಲ್ಮನವಿ ಪ್ರಕರಣದಲ್ಲಿ ಉಪ ವಿಭಾಗಾಧಿಕಾರಿಗಳು ಸದರಿ ವಿಲ್ ಪತ್ರದ ನೈಜತೆಯನ್ನು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಬಗೆಹರಿಸಿಕೊಳ್ಳಿ ಎಂದು ತಿಳಿಸಿ ಮೇಲ್ಮನವಿ ಪ್ರಕರಣವನ್ನು ವಜಾ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಉಪ ವಿಭಾಗಾಧಿಕಾರಿಗಳ ಸಮಕ್ಷಮದಲ್ಲಿ ಮೇಲ್ಮನವಿಯು ವಜಾಗೊಂಡ ನಂತರ ವಾದಿಯು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

sd/-
ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ